# ಮಾದರಿ ಪ್ರಶ್ನೆ ಪತ್ರಿಕೆ - 2

**ಸಮಯ: 3:15 ಗಂಟೆ** **ವಿಷಯ: ಸಮಾಜ ವಿಜ್ಞಾನ** **ಅಂಕಗಳು: 80**

**I. ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1X8=8**

1. ಭಾರತಕ್ಕೆ ಸೇರದೇ ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದ ಜಮ್ಮು ಕಾಶ್ಮೀರದ ರಾಜ

   ಎ) ರವಿಸಿಂಗ್ ಬಿ) ರಣಜಿತ್ ಸಿಂಗ್ ಸಿ) ಹರಿಸಿಂಗ್ ಡಿ) ಹರಸಿಂಗ್

2. ಯುರೋಪಿನ ದೇಶಗಳಲ್ಲಿ ತೀವ್ರವಾದ ಪೈಪೋಟಿ ಸೃಷ್ಟಿಯಾಗಲು ಕಾರಣ

   ಎ) ಕೈಗಾರಿಕಾ ಕ್ರಾಂತಿ ಬಿ) ಪುನರುಜ್ಜೀವನ ಸಿ) ವಸಾಹತುಶಾಹಿತ್ವ ಡಿ) ಸಾಮ್ರಾಜ್ಯಶಾಹಿತ್ವ

3. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕರ್ನಾಟಕದಲ್ಲಿ ರಚಿಸಲಾದ ಸಮಿತಿ

   ಎ) ಡಾ. ಡಿ ಎಂ ನಂಜುಂಡಪ್ಪ ಸಮಿತಿ ಬಿ) ಸಾಮಾಜಿಕ ಮತ್ತು ಆರ್ಥಿಕ ಸಮಿತಿ

   ಸಿ) ಹೈದರಾಬಾದ್ ಅಭಿವೃದ್ಧಿ ಸಮಿತಿ ಡಿ) ಗುಡ್ಡಗಾಡು ಅಭಿವೃದ್ಧಿ ಸಮಿತಿ

4. ಅಸಂಘಟಿತ ದುಡಿಮೆಗೆ ಉದಾಹರಣೆ

   ಎ) ಶಾಲೆಗಳು ಬಿ) ಸೈನ್ಯ ಸಿ) ಕೃಷಿ ಕಾರ್ಮಿಕ ಡಿ) ಕಾರ್ಖಾನೆ ಕಾರ್ಮಿಕ

5. ಸಂಪ್ರದಾಯಿಕ ಶಕ್ತಿ ಮೂಲಗಳ ಬಳಕೆಯಿಂದಾಗುವ ಪರಿಣಾಮ

   ಎ) ಹಸಿರು ಮನೆ ಪರಿಣಾಮ ಬಿ) ಪರಿಸರ ಸಮತೋಲನ ಸೃಷ್ಟಿ ಸಿ) ಜನಸಂಖ್ಯಾ ಹೆಚ್ಚಳ ಡಿ) ಭೂ ಶಾಖದ ಇಳಿಮುಖ

6. ರಸ್ತೆ ಅಭಿವೃದ್ಧಿ ಯೋಜನೆಗಳಲ್ಲಿ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಯೋಜನೆ

   ಎ) ಗ್ರಾಮ ಸಡಕ್ ಯೋಜನೆ ಬಿ) ಸುವರ್ಣ ಚತುಷ್ಕೋನ ಯೋಜನೆ ಸಿ) ಕಾರಿಡಾರ್ ಯೋಜನೆ ಡಿ) ನರೇಗಾ ಯೋಜನೆ

7. ಭಾರತದ ಯೋಜನಾ ಆಯೋಗದ ಸ್ಥಾನದಲ್ಲಿ ಸ್ಥಾಪನೆಯಾದ ಸಂಸ್ಥೆ

   ಎ) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಬಿ) ಅಭಿವೃದ್ಧಿ ಆಯೋಗ ಸಿ) ನೀತಿ ಆಯೋಗ ಡಿ) ಕಾನೂನು ಆಯೋಗ

8. ವ್ಯಾವಹಾರದಲ್ಲಿ ಹೊಸ ಕಲ್ಪನೆಯನ್ನು ರೂಢಿಗೆ ತರುವವನು

   ಎ) ಉತ್ಪಾದಕ ಬಿ) ಗ್ರಾಹಕ ಸಿ) ಶಿಲ್ಪಿ ಡಿ) ಉದ್ಯಮಿ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 1X8=8**

9. ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಚಳುವಳಿ ನಡೆಸಲು ಕಾರಣವೇನು?
10. ಮಹಾಯುದ್ಧದಲ್ಲಿ ಅಮೆರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದಾದ ಪರಿಣಾಮವೇನು?
11. ಭಾರತದ ಯಾವ ರಾಜ್ಯವನ್ನು ಚೈನಾ ತನ್ನದೆಂದು ಪ್ರತಿಪಾದಿಸುತ್ತಿದೆ?
12. ಬಾಲ ಕಾರ್ಮಿಕ ಎಂದರೆ ಯಾರು?
13. ಬಾಲ್ಯ ವಿವಾಹವು ಶಿಕ್ಷಾರ್ಹ ಅಪರಾಧವಾಗಿದೆ. ಏಕೆ?
14. ಚಂಡಮಾರುತಗಳು ಬಂಗಾಳ ಕೊಲ್ಲಿಯಲ್ಲಿಯೇ ಉಂಟಾಗಲು ಕಾರಣವೇನು?
15. ಭಾರತವು ಪ್ರಗತಿಪರ ತೆರಿಗೆ ನೀತಿಯನ್ನು ಏಕೆ ಅನುಸರಿಸುತ್ತಿದೆ?
16. ಬ್ಯಾಂಕುಗಳು "ಸಂಬಂಧ ಕಲ್ಪಿಸುವ ಕೊಂಡಿಗಳಾಗಿವೆ." ಹೇಗೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 2X8=16**

17. 19ನೇ ಶತಮಾನದಲ್ಲಿ ಭಾರತೀಯರಿಗೆ ಪರಿಚಯವಾದ ಪಾಶ್ಚಾತ್ಯ ಪರಿಕಲ್ಪನೆಗಳನ್ನು ಹೆಸರಿಸಿ.
18. 1858 ರ ಬ್ರಿಟನ್ ರಾಣಿಯ ಘೋಷಣೆಯನ್ನು 'ಭಾರತೀಯ ಮಹಾ ಸನ್ನದು' ಎನ್ನುವರು. ಈ ಹೇಳಿಕೆಯನ್ನು ಸಮರ್ಥಿಸಿ
19. ಲಾಭಕೋರತನವನ್ನು ನಿಯಂತ್ರಿಸುವ ವಿಧಾನಗಳಾವುವು?

    **ಅಥವಾ**

    ಭಯೋತ್ಪಾದಕತೆಗೆ ಕಾರಣಗಳೇನು?

**ರುದ್ರೇಶ ಕೆ.ಎಸ್. ಸರ್ಕಾರಿ ಪ್ರೌಢಶಾಲೆ ಸಂಕಿಘಟ್ಟ, ಮಾಗಡಿ ತಾ. ರಾಮನಗರ ಜಿಲ್ಲೆ.**

20. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?

**ಅಥವಾ**

ಜನಮಂದೆಯ ಸ್ವರೂಪವನ್ನು ವಿವರಿಸಿ.

21. ಬೇಸಿಗೆ ಕಾಲದಲ್ಲಿ ಬೀಳುವ ಮಳೆಗೆ ವಿವಿಧ ರಾಜ್ಯಗಳಲ್ಲಿ ಏನೆಂದು ಕರೆಯುತ್ತಾರೆ?

22. ಭಾರತದಲ್ಲಿ ವಿವಿಧ ಬಗೆಯ ನೀರಾವರಿ ಪದ್ಧತಿಗಳು ರೂಢಿಯಲ್ಲಿವೆ ಎಂದು ಹೇಗೆ ಹೇಳುವಿರಿ?

23. ಗ್ರಾಮೀಣ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿಮಾಡಿ.

24. ಗ್ರಾಹಕ ಸಂರಕ್ಷಣಾ ಕಾಯ್ದೆಯು ಗ್ರಾಹಕ ಹಿತಾಸಕ್ತಿ ಕಾಪಾಡಲು ನೀಡಿರುವ ಹಕ್ಕುಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.** **3X9=27**

25. ಭಾರತದೊಂದಿಗೆ ಮರುವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು. ಚರ್ಚಿಸಿ

**ಅಥವಾ**

ಪಂಜಾಬ್ ಬ್ರಿಟಿಷರ ಆಶ್ರಿತ ರಾಜ್ಯವಾದ ಬಗೆ ಹೇಗೆ?

26. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

27. "ನೆಹರೂರವರು ಕೈಗಾರಿಕೀಕರಣ ಹಾಗೂ ನವಭಾರತದ ಶಿಲ್ಪಿ." ಸ್ಪಷ್ಟಪಡಿಸಿ

28. ಭದ್ರತಾ ಸಮಿತಿಯ ರಚನೆಯನ್ನು ವಿವರಿಸಿ.

29. ಅರಣ್ಯ ಸಂರಕ್ಷಣಾ ವಿಧಾನಗಳಾವುವು?

**ಅಥವಾ**

ಭಾರತದ ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

30. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

31. ಭಾರತದ ಭೂ ಸ್ವರೂಪಗಳಲ್ಲಿ ಶಿವಾಲಿಕ್ ಶ್ರೇಣಿಯನ್ನು ಕುರಿತು ಬರೆಯಿರಿ.

32. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ.

**ಅಥವಾ**

ಮುಂದುವರೆಯುತ್ತಿರುವ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳಾವುವು?

33. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳ ನಡುವಿನ ಭಿನ್ನತೆಗಳಾವುವು?

**ಅಥವಾ**

ಸ್ವ ಉದ್ಯೋಗ ಉದ್ದಿಮೆಯಲ್ಲಿ ಸ್ಥಾಪಿಸಬಹುದಾದ ವ್ಯವಹಾರ ಸಂಸ್ಥೆಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** **4X4=16**

34. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

35. ಮಹಲ್ವಾರಿ ಹಾಗೂ ರೈತವಾರಿ ಪದ್ಧತಿಗಳ ನಡುವಿನ ವ್ಯತ್ಯಾಸಗಳೇನು?

**ಅಥವಾ**

"1935ರ ಭಾರತ ಸರ್ಕಾರದ ಕಾಯ್ದೆಯು ಭಾರತ ಸಂವಿಧಾನದ ಬುನಾಧಿ." ಈ ಹೇಳಿಕೆಯನ್ನು ಪರೀಕ್ಷಿಸಿ

36. ಭಾರತದಲ್ಲಿ ಬಡತನ ನಿರ್ಮೂಲನೆಗಾಗಿ ಕೈಗೊಂಡಿರುವ ಕ್ರಮಗಳಾವುವು?

37. ಮೆಕ್ಕಲು ಮಣ್ಣು ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

**VI. 38. ಭಾರತದ ನಕ್ಷೆಯನ್ನು ರಚಿಸಿ, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.** **1+4=5**

ಎ) ಕೈಗಾ ಬಿ) ಮುಂಬೈ ಸಿ) ಭೂಪಾಲ್ ಡಿ) ಬೆಳಗಾವಿ

********************